# ಬಿತ್ತಿದಷ್ಟೂ ಬದುಕು

ಮಣ್ಣಿಗೆ ಬೀಜವನ್ನು ಬಿತ್ತುವುದು ನಮಗೆ ಗೊತ್ತು. 'ಹೊನ್ನ ಬಿತ್ತೇವು ನೆಲಕೆಲ್ಲ' ಎನ್ನುವುದು ಜನಪದರ ಗತ್ತು. ಮಣ್ಣಿಂದ ಹೊನ್ನು ಹೆಕ್ಕುತ್ತೇವೆ. ಅದೇ ಹೊನ್ನನ್ನು ಮಣ್ಣಿಗೆ ಬಿತ್ತುವುದೆ?

ಮಣ್ಣಿನ ಕಣ್ಣುಗಳನ್ನು ಅರಳಿಸಿ ಬೀಜ ಬಿತ್ತುವುದು ರೈತನಧರ್ಮ. ಆ ಬೀಜ ಕುಡಿಯೊಡೆದು ಪಯಿರಾಗಿ ಕಾಳಾಗಿ ಅನ್ನವಾಗುತ್ತದೆ. ಪ್ರಾಣಮಯವಾದ ಅನ್ನ ಹೊನ್ನಿಗಿಂತಲೂ ಅಮೂಲ್ಯವಾದುದು. ಜನಪದರಿಗೆ ಅನ್ನ ದೈವದ ರೂಪ. 'ಹೊನ್ನ ಬಿತ್ತೇವು ಹೊಲಕೆಲ್ಲ' ಎನ್ನುವ ಜನಪದರ ಮಾತು ಭಾವಕೋಶಕ್ಕೆ ಸಂಬಂಧಿಸಿದ್ದು, ಕಾಯಕದ ಘನತೆಯನ್ನು ಸೂಚಿಸುವಂತಹದ್ದು.

ಬಿತ್ತುವ ಕ್ರಿಯೆ ಕೃಷಿಗೆ ಸಂಬಂಧಿಸಿದ್ದು, ಬಿತ್ತುವವ ಕೃಷಿಕನಷ್ಟೇ. ಆದರೆ, ಕೃಷಿಕರಲ್ಲದವರು ಕೂಡ ಒಂದಲ್ಲಾ ಒಂದು ಬಗೆಯಲ್ಲಿ ಬಿತ್ತುವವರೇ ಆಗಿರುತ್ತಾರೆ. ಹೀಗೆ ಬಿತ್ತುವ ಕ್ರಿಯೆಯಲ್ಲಿ ರೈತನ ನಂತರದ ಸ್ಥಾನ ಶಿಕ್ಷಕನದು. ಗುರುವಿನ ಪಾಲಿಗೆ ಅಕ್ಷರಗಳೇ ಬೀಜಗಳು. ಮಕ್ಕಳ ಮನಸ್ಸೇ ಮಣ್ಣು. ಎಳೆಯರ ಮನಸ್ಸಿನಲ್ಲಿ ಶಿಕ್ಷಕ ತನ್ನ ಶ್ರಮ–ಬದ್ಧತೆಯಿಂದ ಬಿತ್ತುವ ಅಕ್ಷರಬೀಜಗಳು, ಆ ಮಕ್ಕಳ ಬದುಕನ್ನೇ ಬದಲಿಸುತ್ತವೆ. ಮಕ್ಕಳ ಮೂಲಕ ನಾಡಿನ ಭಾಗ್ಯವನ್ನು ಬದಲಿಸುವ ಗುರುತರ ಹೊಣೆ ಗುರುವಿನದು. ರೈತನ ಬಿತ್ತನೆ ಲೋಕಕ್ಕೆ ಅನ್ನ ಮತ್ತು ಶಕ್ತಿ ನೀಡಿದರೆ, ಶಿಕ್ಷಕನ ಬಿತ್ತನೆ ಜ್ಞಾನ ಹಾಗೂ ಶಕ್ತಿ ನೀಡುತ್ತದೆ.

'ಎದೆಗೆ ಬಿದ್ದ ಅಕ್ಷರ' ಎನ್ನುವುದು ದೇವನೂರ ಮಹಾದೇವ ಸೃಷ್ಟಿಸಿರುವ ರೂಪಕ. ಜಾತಿ ಕಾರಣದಿಂದಾಗಿ ತಬ್ಬಲಿಗಳಾದ ಸಮುದಾಯಗಳಿಗೆ ಅಕ್ಷರಗಳೇ ವಿಮೋಚನೆಯ ಬೆಳಕಿನ ಬೀಜಗಳು. ಅಕ್ಷರಗಳ ಮೂಲಕ ದುರ್ಬಲ ಸಮುದಾಯಗಳು ಅರಿವು–ಅನ್ನ ಕಂಡುಕೊಂಡಿವೆ, ಆತ್ಮವಿಶ್ವಾಸ ಪಡೆದುಕೊಂಡಿವೆ.

ಸಮರ್ಥ ಬರಹಗಾರ ಕೂಡ ಅಕ್ಷರಗಳ ಬಿತ್ತನೆಗಾರನೇ. ಅವರ ಬರವಣಿಗೆ ಸಹೃದಯರು, ಸಮುದಾಯದ ಮನಸ್ಸುಗಳಲ್ಲಿ ಬೀಜವಾಗಿ ಪ್ರಭಾವಿಸುತ್ತದೆ. ಮಧುರಚೆನ್ನರ ಅಂತಿಮಸಂಸ್ಕಾರದ ಸಂದರ್ಭದಲ್ಲಿ, 'ಹೂತಿಲ್ಲ, ಬಿತ್ತೇವಿ' ಎಂದರು ಬೇಂದ್ರೆ ಅಜ್ಜ. ಆ ಮಾತಿನ ಚುಂಗು ಹಿಡಿದರೆ, ಕವಿರಾಜಮಾರ್ಗಕಾರ ಪಂಪನಿಂದ ಹಿಡಿದು ಕುವೆಂಪು ಲಂಕೇಶರವರೆಗೆ ಎಲ್ಲ ಮಹತ್ವದ ಬರಹಗಾರರೂ ಬೀಜಗಳಾಗಿ ಕನ್ನಡಿಗರ ಮನಸ್ಸುಗಳಲ್ಲಿ ಹೊಸ ಹುಟ್ಟುಗಳನ್ನು ಪಡೆಯುತ್ತಲೇ ಇದ್ದಾರೆ.

ಬಿತ್ತಿ ಬೆಳೆಯುವುದರ ಭಿತ್ತಿಯನ್ನು ಕವಿ ಎಸ್. ಮಂಜುನಾಥ್ ಬಹು ಸೊಗಸಾಗಿ ವಿಸ್ತರಿಸಿದ್ದಾರೆ. 'ಬೆಳಗೊಳದಲ್ಲಿ' ಕವಿತೆಯಲ್ಲಿ ಅವರು ಕಂಡ ಬಿತ್ತನೆ–ಫಲ ಹೀಗಿದೆ: 'ಬಾಹುಬಲಿ ಬೆನ್ನಿಗೆ ಬೆಟ್ಟದಡಿಗೆ / ಅನಾದಿ ಹೊಲ ಹರಡಿದೆ / ಅಲ್ಲಿ ರೆಂಟೆ ಹೊಡೆದಿರುವ ಪುಟ್ಟ ಪುಟ್ಟ ಜನರು / ಬಾಹುಬಲಿಯನೂ ಬಿತ್ತಿ ಬೆಳೆದವರು.'

ಬಾಹುಬಲಿಯನ್ನೂ ಬೀಜವಾಗಿ ಕಂಡಿರುವುದು ಒಂದು ಅಪೂರ್ವ ಕಲ್ಪನೆ. ಕೃಷಿ ಹಾಗೂ ಕೃಷಿಕರ ಅಪರಿಮಿತ ಶಕ್ತಿಯನ್ನು ಸೂಚಿಸಲಿಕ್ಕಾಗಿ ಬಾಹುಬಲಿಯನ್ನು ಬಿತ್ತಿ ಬೆಳೆದವರ ರೂಪದಲ್ಲಿ ರೈತರನ್ನು ಕಲ್ಪಿಸಿಕೊಳ್ಳುವುದು ಕವಿ ಕಲಾವಿದನಿಗಷ್ಟೇ ಸಾಧ್ಯ. ಬಾಹುಬಲಿಯನ್ನು ಬಿತ್ತದ ರೂಪದಲ್ಲಿ ನೋಡುವ ಕವಿತೆ ನಮಗೆ ಏನನ್ನು ಹೇಳುತ್ತಿದೆ?

ಗೊಮ್ಮಟನ ಬದುಕಿನ ಆಶಯಗಳ ಬಿತ್ತನೆ ಹಾಗೂ ಫಲದ ರೂಪದಲ್ಲಿ ಮಂಜುನಾಥರ ಕವಿತೆಯನ್ನು ಓದಿಕೊಳ್ಳಬಹುದು. ತ್ಯಾಗ, ವಿರಾಗ ಹಾಗೂ ಹಿಂಸೆಯ ನಿರರ್ಥಕತೆಯ ಮೊತ್ತವೇ ಗೊಮ್ಮಟನ ಬದುಕು. ರೈತನ ಬದುಕೂ ಭಿನ್ನವೇನಲ್ಲ. ತಾನೂ ಬದುಕಿ, ಲೋಕದ ಹಿತಕ್ಕೂ ಸ್ಪಂದಿಸುವಂತಹದ್ದು ರೈತನ ಕೃಷಿಬದುಕು. ಬೀಜವನ್ನು ಬಿತ್ತಿ, ನೀರಿನೊಂದಿಗೆ ಬೆವರನ್ನೂ ಉಣಿಸುವ ರೈತ ಎಲ್ಲ ಕಾಲಕ್ಕೂ ಅನ್ನದಾತ, ಶಾಂತಿದೂತ. 'ಕಷ್ಟದೊಳನ್ನವ ದುಡಿವನೆ ತ್ಯಾಗಿ' ಎನ್ನುವ ಕುವೆಂಪು, 'ಯಾರೂ ಅರಿಯದ ನೇಗಿಲ ಯೋಗಿಯೆ ಲೋಕಕೆ ಅನ್ನವನೀಯುವನು' ಎನ್ನುತ್ತಾರೆ.

ಹೆಸರನು ಬಯಸದ, ಅತಿಸುಖ ಗಳಿಸದ ರೈತ ಗೌರವಕಾಶಿಸದೆ ದುಡಿವವನು ಎನ್ನುವ ಕುವೆಂಪು ಅವರ 'ರೈತಗೀತೆ' ರೈತನನ್ನು 'ಉಳುವ ಯೋಗಿ'ಯೆಂದು ಬಣ್ಣಿಸುತ್ತ, 'ನೇಗಿಲ ಕುಲದೊಳಗಡಗಿದೆ ಕರ್ಮ, ನೇಗಿಲ ಮೇಲೆಯೆ ನಿಂತಿದೆ ಧರ್ಮ' ಎಂದು ಆತ್ಯಂತಿಕ ಸತ್ಯವೊಂದನ್ನು ನುಡಿಯುತ್ತದೆ. 'ಕರ್ಮವನ್ನು ಇಹಪರ ಸಾಧನ' ಎಂದು ಬಗೆಯುವ ನೇಗಿಲ ಯೋಗಿಗಳು ಗೊಮ್ಮಟನನ್ನು ಬೆಳೆಯುವುದರಲ್ಲಿ ಅಚ್ಚರಿಯೇನಿದೆ. ಈ ಯೋಗಿಗಳು ಬುದ್ಧನನ್ನೂ ಬೆಳೆಯಬಲ್ಲರು; ಗಾಂಧಿಯನ್ನೂ ಬಿತ್ತವನ್ನಾಗಿಸಿಕೊಳ್ಳಬಲ್ಲರು.

ಜಗತ್ತಿನ ಎಲ್ಲ ಮಹಾತ್ಮರೂ ಒಂದರ್ಥದಲ್ಲಿ ರೈತರೇ. ಸಮಾಜದಲ್ಲಿ ಮೌಲ್ಯಗಳ ಬಿತ್ತನೆ ಮಾಡುವುದಕ್ಕಾಗಿ ತಮ್ಮನ್ನೇ ಎಣ್ಣೆ ಬತ್ತಿಗಳಂತೆ ಉರಿಸಿಕೊಂಡ ಸಾಲುದೀಪಗಳನ್ನು ಎಲ್ಲ ಕಾಲ–ದೇಶಗಳೂ ಕಂಡಿವೆ. ಬಿತ್ತುವುದರಲ್ಲಿ ನಂಬಿಕೆ ಕಳೆದುಕೊಳ್ಳದ ಕನಸುಗಾರರಿಂದಲೇ ಈ ಲೋಕ ಜೀವ ಉಳಿಸಿಕೊಂಡು ಮುಂದುವರೆದಿದೆ. ಬರಗಾಲದಲ್ಲೂ, ಯುದ್ಧದ ಹೊತ್ತಿನಲ್ಲೂ ಬಿತ್ತನೆ ನಿಂತಿಲ್ಲ, ನಿಲ್ಲಬಾರದು. ಆದರೆ, 'ಕಾಲವೈಪರೀತ್ಯ' ಎನ್ನುವುದು ಇದೆಯಷ್ಟೇ. ಅದರಿಂದ ಪ್ರೇರಿತರಾಗಿ, ಬಿತ್ತನೆಯ ಕುರಿತು ನಾವು ನಂಬಿಕೆ ಕಳೆದುಕೊಂಡಿದ್ದೇವೆಯೇ? ವರ್ತಮಾನದ ಮನೋಧರ್ಮ ಗಮನಿಸಿ: ಮೊಬೈಲ್ ತಲೆಮಾರಿನ ಜಾಣ ಜಾಣೆಯರಿಗೆ ಬಿತ್ತುವುದರಲ್ಲಿ ಆಸಕ್ತಿ ಕುಂಠಿತವಾದಂತಿದೆ. ಬಿತ್ತುವುದಕ್ಕಿದು ಕಾಲವಲ್ಲ ಎನ್ನುವ ಮನೋಧರ್ಮ ಬಲವಾಗುತ್ತಿರುವಂತಿದೆ. ಕಟಾವಿನಲ್ಲಿ ಕುತೂಹಲಿಗಳೇ ಎಲ್ಲರೂ.

'ಜವರಾಯ ಬಂದರೆ ಬರಿಗೈಲಿ ಬರಲಿಲ್ಲ' ಎನ್ನುವ ಜನಪದ ಗೀತೆ ದುರಂತದ ವಿಷಾದವನ್ನು ಎದೆಗೆ ಬಿತ್ತುತ್ತದೆ. ಕುಡುಗೋಲು ಕೊಡಲಿ ಒಂದ್ಹೆಗಲೇರಿ ಬಂದ ಜವರಾಯ, 'ಒಳ್ಳೊಳ್ಳೆ ಮರವ ಕಡಿಬಂದ, ಫಲ ಬಿಟ್ಟ ಮರವ ಕಡಿಬಂದ' ಎನ್ನುತ್ತದೆ ಗೀತೆ. ನಮ್ಮ ವರ್ತಮಾನಕ್ಕೋ ಜವರಾಯನ ಅವಶ್ಯಕತೆಯೇ ಇಲ್ಲ! ನಾವೇ ಜವರಾಯರು; ನಮ್ಮ ಕೊಡಲಿ ಕುಡುಗೋಲುಗಳ ಬೀಸಿಗೆ ಮೌಲ್ಯಗಳೆಂಬ ಒಳ್ಳೊಳ್ಳೆ ಫಲಗಳೇ ಗುರಿಗಳು!

ಕೊಡಲಿ ಹಿಡಿದ ಕೈಗಳಿಗೆ ನೇಗಿಲು ಬಾರದೆ ಹೋದರೆ ಬಿತ್ತುಗಳೂ ಇಲ್ಲ, ಬಿತ್ತನೆಯೂ ಇಲ್ಲ, ಬದುಕೂ ಇಲ್ಲ.

**■ ಚಂಪಕಮಾಲಾ**

## ಮಾತೇ ಮುತ್ತು

- ಅಮ್ಮನ ಮಡಿಲೊಳು ಮಲಗಿಹ ನನಗೆ ಗುಮ್ಮನ ಭಯವಿಹುದೇನಣ್ಣ.

—ಕುವೆಂಪು

- ಶಾಂತತೆ ನಮ್ಮ ಸಹಜ ಗಣ. ಅದನ್ನು ಅರಿಯದೆ ಹೊರಗಿನಿಂದ ಎರವಲು ಪಡೆಯಲು ಯತ್ನಿಸುತ್ತೇವೆ, ಇದು ನಮ್ಮೆಲ್ಲ ಚಡಪಡಿಕೆಗಳಿಗೂ ಕಾರಣವಾಗಿಬಿಡುತ್ತದೆ.

—ರಮಣ ಮಹರ್ಷಿ

- ಸಹನೆಗಿಂತ ಮಿಗಿಲಾದ ಶಿಸ್ತಿನ ನಿಯಮವಿಲ್ಲ. ಸಹನೆಯು ತಪಗಳಲ್ಲೇ ಶ್ರೇಷ್ಠವಾದುದು. ಸಹನೆಗಿಂತ ಮಿಗಿಲಾದ ಶ್ರೇಷ್ಠ ಗುಣ ಇನ್ನೊಂದಿಲ್ಲ. ಯಾರ ಬಲವು ಸಹನೆಯೋ ಆತನೇ ಶ್ರೇಷ್ಠ.

—ಗೌತಮ ಬುದ್ಧ

- ಯಾವಾಗ ನಿಮ್ಮಲ್ಲಿರುವ ನಾನು ಎಂಬ ಅಹಂ ನಿಮ್ಮನ್ನು ಬಿಟ್ಟು ಹೋಗುತ್ತೋ ಅವತ್ತು ನೀವು ಮೋಕ್ಷಕ್ಕೆ ಅರ್ಹರಾಗುತ್ತೀರಿ.

—ಕನಕದಾಸ

- ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದು ಪರಿ, ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯ! ನುಡಿಗೆ ತಕ್ಕ ನಡೆಯ ಕಂಡರೆ ಕೂಡಲಸಂಗಮದೇವ ತನ್ನೊಳಗಿಪ್ಪನಯ್ಯ!

—ಬಸವಣ್ಣ

- ಮಕ್ಕಳು ತಮ್ಮ ನಡುವಿನ ವ್ಯತ್ಯಾಸಗಳ ಬಗ್ಗೆ ಯೋಚಿಸುವುದಿಲ್ಲ.

—ಜವಹರಲಾಲ್ ನೆಹರೂ

- ಗೆಲುವು ಅನ್ನುವುದು ನೆರಳಿನ ತರಹ. ಅದನ್ನು ಹಿಡಿಯಲು ಪ್ರಯತ್ನಿಸಬೇಡ. ನಿನ್ನ ದಾರಿಯಲ್ಲಿ ನೀನು ಮುಂದೆ ಸಾಗು. ತನ್ನಷ್ಟಕ್ಕೇ ತಾನೆ ಅದು ನಿನ್ನ ಹಿಂದೆ ಬರುತ್ತದೆ.

—ಅಬ್ದುಲ್ ಕಲಾಂ